# ಸಿನಿಮಾ ಶಾಲೆಯಲ್ಲಿ ಸಿಂಧು ಪ್ರಯೋಗ

**ಸಿದ್ಧಸೂತ್ರಗಳ ಸಿನಿಮಾ ಚೌಕಟ್ಟಿನಿಂದ ಹೊರಬಂದು, ಸುಂದರ ಕಥೆಯೊಂದರ ಸಿನಿಮಾ ಮಾಡಬೇಕೆಂಬ ಪ್ರಯತ್ನದೊಂದಿಗೆ ನಿರ್ದೇಶನಕ್ಕಿಳಿದಿದ್ದಾರೆ ಸಿಂಧು ಶ್ರೀನಿವಾಸಮೂರ್ತಿ. ಅವರ ನಿರ್ದೇಶನದ 'ಆಚಾರ್ & ಕೋ' ಸಿನಿಮಾ ಇದೇ ಜುಲೈ 28ಕ್ಕೆ ತೆರೆಕಾಣುತ್ತಿದೆ.**

■ ಸುಮಲತಾ ಎನ್.



'ಫ್ರೆಂಚ್ ಬಿರಿಯಾನಿ', 'ಹೋಪ್' ಕನ್ನಡ ಸಿನಿಮಾಗಳಲ್ಲಿ ಅಭಿನಯಿಸಿರುವ ನಟಿ ಸಿಂಧು ಶ್ರೀನಿವಾಸಮೂರ್ತಿ ಅವರು ಇದೀಗ ಸಿನಿಮಾ ನಿರ್ದೇಶನದ ಚುಕ್ಕಾಣಿ ಹಿಡಿದಿದ್ದಾರೆ. ರಂಗಭೂಮಿಯ ನಂಟಿನೊಂದಿಗೆ ಸಿನಿಮಾ ಜಾಡು ಹಿಡಿದಿದ್ದ ಅವರು, 'ಆಚಾರ್ & ಕೋ' ಸಿನಿಮಾ ಮೂಲಕ ನಿರ್ದೇಶನದಲ್ಲಿ ತಮ್ಮ ಮೊದಲ ಹೆಜ್ಜೆಯಿಟ್ಟಿದ್ದಾರೆ.

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದಿರುವ ಸಿಂಧು ಅವರು ಓದಿದ್ದು ಬಿ.ಕಾಂ. ಆದರೆ ಮನಸ್ಸು ವಾಲಿದ್ದು ರಂಗಭೂಮಿಯೆಡೆಗೆ. ಹೈಸ್ಕೂಲ್‌ನಲ್ಲಿದ್ದಾಗ ಶಾಲೆಯಲ್ಲಿ ಮಾಡುತ್ತಿದ್ದ ನಾಟಕಗಳನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದ ಅವರು ನಂತರ ಅದೇ ಬೆರಗಿನ ಲೋಕದೆಡೆಗೆ ಹೊರಳಿದರು. ಶಾಲೆ–ಕಾಲೇಜು ದಿನಗಳಲ್ಲೇ ಬೆಂಗಳೂರಿನಲ್ಲಿ ನಡೆಯುತ್ತಿದ್ದ ಕೆಲವು ನಾಟಕಗಳಲ್ಲಿ ಅಭಿನಯಿಸಲು ಆರಂಭಿಸಿದ್ದರು.

'ಹೈಸ್ಕೂಲ್‌ನಲ್ಲಿದ್ದಾಗಲೇ ಓದಿನ ಹೊರತಾಗಿಯೂ ಬೇರೇನನ್ನಾದರೂ ಮಾಡಬೇಕು ಎಂದು ಯಾವಾಗಲೂ ಅನ್ನಿಸುತ್ತಿತ್ತು. ಇಂಥ ಸಮಯದಲ್ಲಿ ಮನಸ್ಸು ನಾಟಕಗಳತ್ತ ಹೊರಳಿತು. ಶಾಲೆ–ಕಾಲೇಜು ದಿನಗಳಲ್ಲೇ ಕೆಲವು ನಾಟಕಗಳಲ್ಲಿ ಅಭಿನಯಿಸಿದೆ. ಕಾಲೇಜು ಸೇರಿದಾಗ ಕೆಲವು ರಂಗತಂಡಗಳ ಪರಿಚಯವಾಗಿ ರಂಗಭೂಮಿಯಲ್ಲಿ ತುಂಬಾ ಆ್ಯಕ್ಟಿವ್ ಆಗಿದ್ದೆ. ನನಗೆ ಹದಿನಾರು ವರ್ಷವಿದ್ದಾಗ ಮೊದಲ ವೃತ್ತಿಪರ ನಾಟಕ ಮಾಡಿದ್ದು' ಎಂದು ನೆನಪಿಸಿಕೊಳ್ಳುತ್ತಾರೆ ಸಿಂಧು.

ಕಾಲೇಜಿನಲ್ಲಿ ರಂಗಭೂಮಿಯ ಬೆನ್ನು ಹತ್ತಿದ ಅವರು, ಬಿ.ಕಾಂ. ಮುಗಿಸಿದ ನಂತರ ಲೆಕ್ಕಾಚಾರ ಬದಿಗಿಟ್ಟು ಕಲೆಯೆಡೆಗೆ ಹಾದಿ ಬದಲಿಸಿದರು. ಮುಂಬೈನಲ್ಲಿ 'ಸ್ಕ್ರೀನ್ ರೈಟಿಂಗ್ ಕೋರ್ಸ್'ಗೆ ಸೇರಿದರು. ಎರಡು ವರ್ಷ ನಟನಾಭ್ಯಾಸ ಮುಂದುವರೆಸುತ್ತಾ ಈ ಕ್ಷೇತ್ರದಲ್ಲಿಯೇ ಹಾದಿ ರೂಪಿಸಿಕೊಳ್ಳುವ ತಯಾರಿ ಮಾಡಿದ್ದರು. ಮುಂಬೈನಲ್ಲಿ ವೆಬ್‌ಸೀರೀಸ್, ಜಾಹೀರಾತುಗಳಲ್ಲಿ ಕೆಲಸ ಮಾಡಿದ್ದು ಅವರೊಳಗಿನ ಆಕಾಂಕ್ಷೆಯನ್ನು ಇನ್ನಷ್ಟು ಗಟ್ಟಿಗೊಳಿಸಿತ್ತು.

ರಂಗಭೂಮಿಯ ಒಡನಾಟ ಅವರಿಗೆ ಸಿನಿಮಾ ಅವಕಾಶವನ್ನು ಮುಂದಿಟ್ಟಿತು. 'ಫ್ರೆಂಚ್ ಬಿರಿಯಾನಿ' ಸಿನಿಮಾಗೆ ರಂಗಭೂಮಿ ಹಿನ್ನೆಲೆಯ, ಹೊಸ ಮುಖದ ಹುಡುಕಾಟದಲ್ಲಿದ್ದ ನಿರ್ದೇಶಕ ಪನ್ನಗಭರಣ ಅವರಿಗೆ ಸಿಂಧು ಉತ್ತಮ ಆಯ್ಕೆಯಾದರು. ಅದರ ನಂತರ 'ಸಿನಿಮಾ ಬಂಡಿ' ಎಂಬ ತೆಲುಗು ಸಿನಿಮಾಗೂ ಬಣ್ಣ ಹಚ್ಚಿದರು ಸಿಂಧು. ಈಚೆಗೆ 'ಹೋಪ್' ಸಿನಿಮಾದಲ್ಲೂ ಅಭಿನಯಿಸಿದರು.

'ನಾನು ನಟಿಯಾಗಿ ಸಿನಿಮಾ ಕ್ಷೇತ್ರಕ್ಕೆ ಬಂದೆ. ನಿರ್ದೇಶನದ ಬಗ್ಗೆ ಆಲೋಚನೆ ಇರಲಿಲ್ಲ. ಆದರೆ ಮುಂಬೈನಲ್ಲಿದ್ದಾಗ ಸ್ಕ್ರೀನ್ ರೈಟಿಂಗ್ ಕೋರ್ಸ್ ಮುಗಿಸಿದ ಮೇಲೆ ಚಿತ್ರಕಥೆಯೊಂದನ್ನು ಬರೆದಿದ್ದೆ. ಅದು 'ಆಚಾರ್ & ಕೋ'. ಇದನ್ನು ಸಿನಿಮಾ ಆಗಿ ರೂಪಿಸಬೇಕೆಂಬ ಮಹದಾಸೆ ನನ್ನದಾಗಿತ್ತು. ಇದನ್ನು ನಿರ್ಮಾಪಕರಿಗೆ ತೋರಿಸಿದಾಗ, ಅವರು ಕೇಳಿದ ಮೊದಲ ಪ್ರಶ್ನೆ, ನಿರ್ದೇಶನ ಯಾರು ಮಾಡುತ್ತಾರೆ ಎಂದು. ನೀನೇ ಏಕೆ ನಿರ್ದೇಶನ ಮಾಡಬಾರದು ಎಂಬ ಸ್ನೇಹಿತರೊಬ್ಬರ ಸಲಹೆ ನನ್ನನ್ನು ನಿರ್ದೇಶನದತ್ತ ಆಲೋಚಿಸುವಂತೆ ಮಾಡಿತು' ಎಂದು ತಮ್ಮ ಹೊಸ ಹಾದಿಯ ಆರಂಭವನ್ನು ಪರಿಚಯಿಸುತ್ತಾರೆ.

ತಮ್ಮ ನಿರ್ದೇಶನದ ಟ್ರಯಲ್ ಎಂಬಂತೆ ಎರಡು ದಿನ ಶೂಟ್ ಮಾಡಿ 6 ನಿಮಿಷದ ಒಂದು ಸ್ಯಾಂಪಲ್ ಫಿಲ್ಮ್ ಮಾಡಿದ ಅವರು, ಅದನ್ನು ಹೊಸಬರಿಗೆ ಅವಕಾಶ ನೀಡುವ 'ಪಿಆರ್‌ಕೆ ಪ್ರೊಡಕ್ಷನ್ಸ್' ಮುಂದಿಟ್ಟರು. ಸಿನಿಮಾ ನಿರ್ದೇಶನದ ಜವಾಬ್ದಾರಿ ಸಿಂಧು ಹೆಗಲೇರಿತು. ಕೊರೊನಾ, ನಟ ಪುನೀತ್ ರಾಜ್ ಕುಮಾರ್ ಮರಣ, ಹೀಗೆ ಹಲವು ಕಾರಣಗಳಿಂದ ಸಿನಿಮಾ ಸಮಯ